ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ

ದಿನಾಂಕ : DATE 18/10/2020

# ಕೊರೋನಾ ಯೋಧರಿಗೂ ಹುತಾತ್ಮ ಗೌರವ ನೀಡಿ

## ದಸರಾ ಉದ್ಘಾಟನೆ ಭಾಗ್ಯ ಸಿಕ್ಕಿದ್ದು ವೈದ್ಯ ಸಮುದಾಯಕ್ಕೆ ದೊರೆತ ದೊಡ್ಡ ಗೌರವ। ನನ್ನ ಜೀವಿತಾವಧಿಯ ಅತಿದೊಡ್ಡ ಭಾಗ್ಯ

## ಕೊರೋನಾ ಲಸಿಕೆ ಬೇಗ ಬರಲಿ, ನೆರೆ ಇಳಿಯಲೆಂದು ಪ್ರಾರ್ಥಿಸಿದ್ದೇನೆ: ಕೊರೋನಾ ವಾರಿಯರ್ ಡಾ|ಸಿ.ಎನ್.ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಮೈಸೂರು 18/10/20

ಕೋವಿಡ್ ಹಿನ್ನೆಲೆಯಲ್ಲಿ ಈ ಬಾರಿ ಸರಳ ಮತ್ತು ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿರುವ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ, ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಚಾಮುಂಡಿಬೆಟ್ಟದಲ್ಲಿ ಶನಿವಾರ ಚಾಲನೆ ನೀಡಿದರು. ಈ ವೇಳೆ ಕೊರೋನಾ ಲಸಿಕೆ ಬೇಗ ಬರಲಿ, ಜಲಪ್ರವಾಹ ಕಡಿಮೆಯಾಗಲಿ ಎಂದು ಹಾರೈಸಿದ ಅವರು, ಕೊರೋನಾ ವಾರಿಯರ್ಸ್ ಮೃತರಾದರೆ ಅವರನ್ನು ಹುತಾತ್ಮರೆಂದು ಕರೆಯಬೇಕು. ಹುತಾತ್ಮ ಯೋಧರಿಗೆ ಸಿಗುವ ಗೌರವ ಅವರಿಗೂ ಸಿಗುವಂತಾಗಬೇಕು ಎಂದು ಆಗ್ರಹಿಸಿದ್ದಾರೆ.

ಚಾಮುಂಡೇಶ್ವರಿಯಲ್ಲಿ ನನಗಾಗಿ ಏನನ್ನೂ ಪ್ರಾರ್ಥಿಸಲಿಲ್ಲ, ಕೊರೋನಾ ಲಸಿಕೆ ಬೇಗ ಬರಲಿ, ಜಲಪ್ರವಾಹ ಕಡಿಮೆಯಾಗಲಿ ಎಂಬ ಎರಡು ಹಾರೈಕೆಯನ್ನು ಈಡೇರಿಸುವಂತೆ ಪ್ರಾರ್ಥನೆ ಮಾಡಿದ್ದೇನೆ. ಕೊರೋನಾ, ಜಲಪ್ರಳಯದಿಂದ ಲಕ್ಷಾಂತರ ಜನ ನೊಂದಿದ್ದಾರೆ. ↘14



ವಿಶ್ವವಿಖ್ಯಾತ ಮೈಸೂರು ದಸರಾವನ್ನು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ|ಸಿ.ಎನ್.ಮಂಜುನಾಥ್ ಶನಿವಾರ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವರಾದ ಎಸ್.ಟಿ.ಸೋಮಶೇಖರ್, ಬಿ.ಸಿ.ಪಾಟೀಲ್ ಮತ್ತಿತರರಿದ್ದರು.

### ಫೆಬ್ರವರಿ, ಮಾರ್ಚ್ ವೇಳೆಗೆ ಲಸಿಕೆ ನಿರೀಕ್ಷೆ

**[redacted] ಕೊರೋನಾಗೆ ಈ ವರ್ಷ ಲಸಿಕೆ ಬರುವ ಲಕ್ಷಣಗಳಿಲ್ಲ. ಮುಂದಿನ ವರ್ಷದ ಫೆಬ್ರವರಿ, ಮಾರ್ಚ್‌ನಲ್ಲಿ ಲಸಿಕೆ ಬರಬಹುದು. ಚೀನಾದಲ್ಲಿ ಸೃಷ್ಟಿಯಾದ ವೈರಸ್ ಇಡೀ ಪ್ರಪಂಚವನ್ನೇ ನಡುಗಿಸಿದೆ. ಮಾಡಬಾರದ್ದನ್ನು ಮಾಡಿದರೆ ತಿನ್ನಬಾರದ್ದನ್ನು ತಿಂದರೆ ಹೇಗೆ ವೈರಸ್ ಹುಟ್ಟುತ್ತದೆ ಎಂಬುದಕ್ಕೆ ಇದು ಸಾಕ್ಷಿ.**

• **ಡಾ|ಸಿ.ಎನ್.ಮಂಜುನಾಥ್**
ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

### 6 ಮಂದಿ ಕೊರೋನಾ ಯೋಧರಿಗೆ ಸನ್ಮಾನ

ಕೊರೋನಾ ವೇಳೆ ತಮ್ಮ ಜೀವ ಪಣಕ್ಕಿಟ್ಟು ಜನರಿಗೆ ಸೇವೆ ಸಲ್ಲಿಸಿದ ವೈದ್ಯ ಡಾ.ಟಿ.ಆರ್. ನವೀನ್, ಪೊಲೀಸ್ ಪೇದೆ ಪಿ. ಕುಮಾರ್, ಪೌರ ಕಾರ್ಮಿಕರಾದ ಮರಗಮ್ಮ, ಆಶಾ ಕಾರ್ಯಕರ್ತೆ ನೂರ್ ಜಾನ್, ಸ್ಟಾಫ್ ನರ್ಸ್ ಪಿ.ಎಂ. ರುಕ್ಮಿಣಿ ಹಾಗೂ ಕೋವಿಡ್ ಸಮಯದಲ್ಲಿ ಮಾತ್ರವಲ್ಲದೇ 20 ವರ್ಷಗಳಿಂದ ಸಾವಿರಾರು ಅನಾಥ ಶವಗಳ ಸಂಸ್ಕಾರ ಮಾಡಿರುವ ಸಾಮಾಜಿಕ ಕಾರ್ಯಕರ್ತ ಅಯೂಬ್ ಅಹಮದ್ ಅವರನ್ನು ಕೊರೋನಾ ವಾರಿಯರ್ಸ್‌ಗಳ ಪರವಾಗಿ ಇದೇ ವೇಳೆ ಸನ್ಮಾನಿಸಲಾಯಿತು.

---

### ಕೊರೋನಾ ಯೋಧರಿಗೂ ಹುತಾತ್ಮ ಗೌರವ ನೀಡಿ

ಕ.ಪ್ರ 18/10/20

↙3ನೇ ಪುಟದಿಂದ
ಆದ್ದರಿಂದ ಕಾಡುವ ಶಕ್ತಿಗಿಂತ ಕಾಪಾಡುವ ಶಕ್ತಿಯ ಬಲದಿಂದ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ಕೊರೋನಾ ಸೋಂಕು ಆದಷ್ಟು ಬೇಗ ನಿರ್ಗಮಿಸಲಿ. ಜನರ ಬದುಕು ಹಸನಾಗಲಿ ಎಂದು ಬೇಡಿಕೊಳ್ಳೋಣ ಎಂದರು.

**ಭಯವೇ ದೊಡ್ಡ ಕಾಯಿಲೆ:** ಕೊರೋನಾ ಪಾಸಿಟಿವ್ ಬಂದವರನ್ನು ಅಸ್ಪೃಶ್ಯರಂತೆ ನೋಡಬೇಡಿ. ಕೊರೋನಾಗಿಂತ ಅದರ ಭಯವೇ ದೊಡ್ಡ ಕಾಯಿಲೆ ಎಂದು ಅಭಿಪ್ರಾಯಪಟ್ಟ ಅವರು, ವೈದ್ಯರ ಮೇಲೆ ಒತ್ತಡ ಹೆಚ್ಚುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಈಗ ವೈದ್ಯರೇ ರೋಗಿಗಳಾಗುತ್ತಿದ್ದಾರೆ ಎಂದರು.